**ಪತ್ರಿಕಾ ಪ್ರಕಟಣೆ**

**ವಿಜಯಪುರ**

**ದಿನಾಂಕ: 17.07.2021.**

**1] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನೆ ನಂ: 206/2021 ಕಲಂ: 279, 337, 338,304(ಎ) ಐ.ಪಿ.ಸಿ.**

ದಿನಾಂಕ: 16.07.2021 ರಂದು 14.00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1) ಮೆಹಬೂಬ ಹಿಸಮಲ್ ಸಾ: ಭರತಪುರ ರಾಜಸ್ಥಾಣ ರಾಜ್ಯ ಲಾರಿ ನಂ: ಎಪಿ:29 ಟಿಎ:6559. ನೇದರ ಚಾಲಕ. 2) ಖುಶಿ ಸಿದ್ದಲಿಂಗಪ್ಪ ಮೇತ್ರಿ ಸಾ: ಗೋಟ್ಯಾಳ ಗೂಡ್ಸ್ ವಾಹನ ನಂ: ಕೆ.ಎ:28 ಡಿ:5347 ನೇದರ ಆರೋಪಿ ಚಾಲಕ. ಲಾರಿ ನಂ ಎ.ಪಿ:29 ಟಿಎ:6559 ನೇದರ ಆರೋಪಿ ಚಾಲಕನು ತಾನು ನಡೆಯಿಸುತ್ತಿದ್ದ ಲಾರಿಯನ್ನು ವಿಜಯಪುರ ಕಡೆಯಿಂದ ಝಳಕಿ ಕಡೆಗೆ ಅತೀ ಜೋರಾಗಿ ಮತ್ತು ನಿರ್ಲಕ್ಷತನದಿಂಧ ನಡೆಯಿಸಿಕೊಂಡು ಹೊರಟಾಗ ಅದೇ ವೇಳೆಯಲ್ಲಿ ಝಳಕಿ ಕಡೆಯಿಂದ ವಿಜಯಪುರ ಕಡೆಗೆ ಗೂಡ್ಸ್ ವಾಹನ ನಂ ಕೆ.ಎ:28 ಡಿ:5347 ನೇದರ ಚಾಲಕನು ಅವನು ಕೂಡಾ ಸದರಿ ವಾಹನವನ್ನು ರಾಂಗ್ ಸೈಡಿನಲ್ಲಿ ಅತೀ ಜೋರಾಗಿ ಮತ್ತು ನಿರ್ಲಕ್ಷತನದಿಂದ ನಡೆಯಿಸಿಕೊಂಡು ಬಂದು ಎರಡೂ ವಾಹನಗಳ ಚಾಲಕರು ಸದರಿ ವಾಹನಗಳನ್ನು ಎದುರಾ ಬದುರು ಒಂದಕ್ಕೊಂದು ಢಿಕ್ಕಿ ಹೊಡೆಯಿಸಿ ಅಪಘಾತಪಡಸಿದ್ದು, ಆ ಕಾಲಕ್ಕೆ ಗೂಡ್ಸ್ ವಾಹನದಲ್ಲಿದ್ದ 1) ಪ್ರತೀಕ ರಾಚಯ್ಯ ಹಿರೇವಠ ಸಾ: ಲೋಣಿ ಬಿ.ಕೆ. 2) ಬುದ್ದಯ್ಯ ರಾಚಯ್ಯ ಹಿರೇಮಠ ಸಾ: ಲೋಣಿ ಬಿಕೆ. ಇವರ ತಲೆಗೆ ಮುಖಕ್ಕೆ ಮೈಕೈಗೆ ಭಾರಿಗಾಯ ಪೆಟ್ಟುಪಡಿಸಿ ಸ್ಥಳದಲ್ಲಿಯೇ ಮರಣ ಹೊಂದುವಂತೆ ಮಾಡಿದ್ದು, ಅಲ್ಲದೇ ಸದರಿ ಗೂಡ್ಸ್ ವಾಹನದಲ್ಲಿದ್ದ ಭಾರಿಗಾಯ ಪೆಟ್ಟು ಹೊಂದಿದ್ದ 3) ಶ್ರೀಶೈಲ ಹೊನ್ನಪ್ಪ ಮಾಲಗಾರ @ ಮೇತ್ರಿ ವಯಾ 34 ವರ್ಷ ಸಾ: ಲೋಣಿ ಬಿಕೆ. ಇತನಿಗೆ ಉಪಚಾರ ಕುರಿತು ವಿಜಯಪುರ ಜಿಲ್ಲಾ ಸರಕಾರಿ ಆಸ್ಪತ್ರೆಗೆ ಒಯ್ಯವಾಗ ಆಸ್ಪತ್ರೆಯ ಸಮೀಪ ಮದ್ಯಾಹ್ನ 02.50 ಸುಮಾರಿಗೆ ತೀರಿಕೊಂಡಿದ್ದು, ಸಿದ್ದರಾಮ @ ಸಿದ್ದಯ್ಯ ಹಿರೇಮಠ ಹಾಗೂ ಗೂಡ್ಸ್ ವಾಹನ ಚಾಲಕ ಖುಶಿ ಸಿದ್ದಲಿಂಗಪ್ಪ ಮೇತ್ರಿ ಇವರುಗಳಿಗೆ ಸಾದಾ ವ ಭಾರಿಗಾಯ ಪೆಟ್ಟುಪಡಿಸಿದ್ದು ಸದರಿ ಎರಡೂ ವಾಹನಗಳ ಚಾಲಕರ ಮೇಲೆ ನನ್ನದು ಫಿರ್ಯಾದಿ ಇರುತ್ತದೆ ಅಂತಾ ವಗೈರೆ ಫಿರ್ಯಾದದಲ್ಲಿ ನಮೂದ ಇರುತ್ತದೆ. ಈ ಬಗ್ಗೆ ರಾಚಯ್ಯ ಸಿದ್ದಯ್ಯ ಹಿರೇಮಠ ಸಾ: ಲೋಣಿ ಬಿ.ಕೆ. ತಾ: ಚಡಚಣ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 16.07.2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಗಾಂಧಿಚೌಕ ಪೊಲೀಸ ಠಾಣೆ ಗುನ್ನಾ. ನಂ: 150/2021 ಕಲಂ: 78(3) ಕೆ.ಪಿ.ಆ್ಯಕ್ಟ**

ದಿನಾಂಕ 15.07.2021 ರಂದು 17.15 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1) ನೀಲಕಂಠ ಶೇಖಪ್ಪ ಅಮರಪ್ಪಗೋಳ, ಸಾ॥ ಜುಮನಾಳ, 2) ಹಮೀದ ಮುಸ್ತಾಪ ಬಳ್ಳಾರಿ, ಸಾ॥ ಗಣಪತಿಚೌಕ ಹತ್ತಿರ, ವಿಜಯಪುರ ಇವರು ತಮ್ಮ ಪಾಯ್ದೆಗೋಸ್ಕರ್ ವಿಜಯಪುರ ಶಹರದ ಗಣಪತಿ ಚೌಕ ಹತ್ತಿರ, ಲೋಣಿ ಪರ್ಟಿಲೈಜರ್ ಅಂಗಡಿ ಮುಂದೆ ಸಾರ್ವಜನಿಕ ರಸ್ತೆಯಲ್ಲಿ ನಿಂತು 1 ರೂಗೆ 80 ರೂ ಕೊಡುವ ಕರಾರಿನ ಮೇಲೆ ಅಂಕಿ ಸಂಖ್ಯೆಗಳ ಸಹಾಯದಿಂದ ಜನರಿಂದ ಹಣ ಪಡೆದುಕೊಂಡು ಕಲ್ಯಾಣ ಮಟಕಾ ಎಂಬುವ ಓ.ಸಿ ಜೂಜಾಟದಲ್ಲಿ ತೊಡಗಿದಾಗ ಸಿಕ್ಕಿ ಅಪರಾಧ. ಈ ಬಗ್ಗೆ ಸ:ತ ರವೀಂದ್ರ ಕೆ ನಾಯ್ಕೋಡಿ ಪೊಲೀಸ್ ಇನ್ಸ್‌ಪೆಕ್ಟರ್ ಗಾಂಧಿಚೌಕ ಪೊಲೀಸ್ ಠಾಣೆ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 16.07,2021 ರಂದು ಗಾಂಧಿಚೌಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 121/2021 ಕಲಂ: 15 [ಎ], ಮತ್ತು 32 [3], ಕೆ.ಇ.ಆ್ಯಕ್ಟ**

ದಿನಾಂಕ 16.07.2021 ರಂದು 16.30 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ 1] ಪ್ರಭಾಕರ ಶಿವಾನಂದ ಶಿರಗಾ ಸಾ॥ ಲಚ್ಯಾಣ ತಾ॥ ಇಂಡಿ ಈತನು ಸಂಬಂಧಿಸಿದ ಪ್ರಾಧಿಕಾರದಿಂದ ಯಾವುದೇ ಲೈಸೆನ್ಸ ವ ಪರವಾನಿಗೆಯನ್ನು ಪಡೆಯದೆ ತನ್ನ ಸ್ವಂತ ಪಾಯಿದೆಗೊಸ್ಕರ ಲಚ್ಯಾಣ ಗ್ರಾಮದ ಹತ್ತಿರ ಇರುವ ತನ್ನ ಬಾಬತ್ತ ದಾಬಾದಲ್ಲಿ ಸಾರ್ವಜನಿಕರಿಗೆ ಮದ್ಯ ಸೇವನೆ ಮಾಡಲು ಅನುಮತಿ ನೀಡಿ ಸಿಕ್ಕಿದ್ದು, ಈ ಬಗ್ಗೆ ಸ:ತ: ಎಸ್. ಎಚ್. ನರೋಟೆ ಎಚ್.ಸಿ-1296 ಇಂಡಿ ಗ್ರಾಮೀಣ ಪೊಲೀಸ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 16.07,2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಝಳಕಿ ಪೊಲೀಸ ಠಾಣೆ ಗುನ್ನಾ. ನಂ: 63/2021 ಕಲಂ: 78 [3] ಕೆ.ಪಿ.ಆ್ಯಕ್ಟ**

ದಿನಾಂಕ: 16.07.2021 ರಂದು 14.30 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ ವಾಸುದೇವ ಅಣ್ಣಾರಾಯ ಕಲಾದಗಿ ಸಾ: ಚಣೇಗಾಂವ 2] ಸಿದ್ದಾರಾಮ ಬಗಲಿ ಸಾ: ಟಾಕಳಿ ತಾ: ದ ಸೋಲಾಪೂರ ಜಿ: ಸೋಲಾಪುರ ಇವರು ಚಡಚಣ ತಾಲೂಕಿನ ಚಣೇಗಾಂವ ಗ್ರಾಮದ ಮಾಳಿಂಗರಾಯನ ಗುಡಿಯ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ನಿಂತು ಒಂದು ರೂಪಾಯಿಗೆ 80/-ರೂ. ಕೊಡುವ ಕರಾರಿನ ಮೇಲೆ ಕಲ್ಯಾಣಿ ಅಂಬುವ ಮಟಕಾ ಓ.ಸಿ.ಜೂಜಾಟವನ್ನು ಆಡುತ್ತಾ ಸಾರ್ವಜನಿಕರಿಂದ ಹಣ ಪಡೆದು ತಮ್ಮ ಪಾಯ್ದೇಗೋಸ್ಕರ ನಡೆಯಿಸಿ ಸಾರ್ವಜನಿಕರಿಂದ ಬರೆದುಕೊಂಡಿರುವ ಅಂಕಿ ಸಂಕ್ಯಗಳು ಇರುವ ಚೀಟಿಗಳನ್ನು ಸಮೇತ ಸಿಕ್ಕ ಅಪರಾಧ. ಈ ಬಗ್ಗೆ ಸ:ತ: ಶ್ರೀ ಪಿ.ಎನ್. ಮನಗೂಳಿ ಪಿ.ಎಸ್.ಐ ಝಳಕಿ ಪೊಲೀಸ್ ಠಾಣೆ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 16.07,2021 ರಂದು ಝಳಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**5] ನಿಡಗುಂದಿ ಪೊಲೀಸ ಠಾಣೆ ಗುನ್ನಾ. ನಂ: 86/2021 ಕಲಂ: 87 ಕೆ.ಪಿ.ಆ್ಯಕ್ಟ**

ದಿನಾಂಕ: 15.07.2021 ರಂದು 17:15 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1] ಸಂತೋಷ ಗುರಣ್ಣ ಬಿರಾದಾರ 2] ಮಲ್ಲಣ್ಣ ಸಿದ್ದಣ್ಣ ಚಿಮ್ಮಲಗಿ 3] ವಿರೇಶ ವಿರುಪಾಕ್ಷಯ್ಯ ವಸ್ತ್ರದ ಇವರು ಹೆಬ್ಬಾಳ ಗ್ರಾಮದ ಮಲ್ಲಯ್ಯನ ಗುಡಿ ಹಿಂದೆ ಸಾರ್ವಜನಿಕ ಸ್ಥಳದಲ್ಲಿ ತಮ್ಮ ತಮ್ಮ ಪಾಯ್ದೆಗೋಸ್ಕರ, ಯಾವುದೆ ಅನುಮತಿ ಇಲ್ಲದೆ ಇಸ್ಪೀಟ ಎಲೆಗಳ ಸಹಾಯದಿಂದ ಅಂದರ-ಬಾಹರ ಅಂಬುವ ಜೂಜಾಟವನ್ನು ಆಡುತ್ತಿರುವಾಗ ಸಿಕ್ಕ ಅಪರಾಧ. ಜಪ್ತಾದ ಮಾಲು: 1. ರೋಖ ಹಣ 14,100/- ರೂ. 2. ಇಸ್ಪೀಟ ಎಲೆಗಳು 52. ಈ ಬಗ್ಗೆ ಸ:ತ: ಚಂದ್ರಶೇಖರ ವಾಯ್ ಹೇರಕಲ್ ಪಿಎಸ್ಐ (ಕಾ&ಸು) ನಿಡಗುಂದಿ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 16.07,2021 ರಂದು ನಿಡಗುಂದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.